# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ಇಲಾಖಾ ಪರೀಕ್ಷೆಗಳು – ನವೆಂಬರ್ 2012

## ಕನ್ನಡ ಭಾಷಾ ಪರೀಕ್ಷೆ – ಪತ್ರಿಕೆ 1

(ಪುಸ್ತಕಗಳು, ಟಿಪ್ಪಣಿಗಳು, ಕೈಪಿಡಿಗಳು ಇತ್ಯಾದಿಗಳ ಉಪಯೋಗಕ್ಕೆ ಅವಕಾಶವಿಲ್ಲ)

ದಿನಾಂಕ: 30.11.2012 ಸಮಯ: ಬೆಳಿಗ್ಗೆ 9.30 ರಿಂದ 11.30 ರವರೆಗೆ

(ಗರಿಷ್ಠ ಅಂಕಗಳು – 100)

---

1. ಇವುಗಳಿಗೆ ಸಂದರ್ಭವನ್ನು ವಿವರಿಸಿ (5 ಕ್ಕೆ ಮಾತ್ರ) 20 ಅಂಕಗಳು

ಅ) "ಈ ಉಂಗುರವು ನನಗೆ ಬಾವಿಯಲ್ಲಿ ಸಿಕ್ಕಿತು ''.

ಆ) "ಮಗು ಇದು ಚೆನ್ನಾಗಿದೆ, ಒಂದು ಕತ್ತರಿಯನ್ನು ಎಲ್ಲಿಯಾದರೂ ಸಂಪಾದಿಸಿಕೊಂಡು ಬಾ''.

ಇ) "ಸಾಯುವ ಸಮಯದಲ್ಲಿ ಇಂಥಾ ಕೆಲಸ ಏಕೆ ಮಾಡಿದೆ? ''.

ಈ) "ಈ ಔಷಧ ಒಂದೇ ನಿಮ್ಮ ಕಾಯಿಲೆಗೆ ಮದ್ದು. ಇದನ್ನು ಸ್ವಲ್ಪ ಎತ್ತಿನ ಹಾಲಿನಲ್ಲಿ ಕದಡಿ ಕುಡಿಯಬೇಕು''.

ಉ) "ನೀನು ನಿನ್ನ ಮಗಳ ಸಂಗಡ ಕಳುಹಿಸಿದ ಎತ್ತಿನ ಹಾಲು ಬಂದು ತಲುಪಿತು''.

ಊ) "ತಾವು ದಯಮಾಡಿ ಎಷ್ಟನ್ನು ಕೊಡುತ್ತೀರೋ ಅಷ್ಟನ್ನು ನಾನು ತೆಗೆದುಕೊಳ್ಳುವೆನು''.

ಋ) "ಅಯ್ಯಾ ಕುರುಡು ಸಾಧು! ಸ್ವಲ್ಪ ಹೊತ್ತಿನ ಮಟ್ಟಿಗೆ ನಿನ್ನ ಬಳಿ ಇರುವ ಆ ಪಾತ್ರೆಯನ್ನು ಕೊಟ್ಟಿರು''.

2. ಈ ಕೆಳಗಿನವುಗಳಲ್ಲಿ ಒಂದರ ಬಗ್ಗೆ ವಿವರಿಸಿ: (ಒಂದು ಪುಟ ಮೀರದಂತೆ) 15 ಅಂಕಗಳು

ಅ) ಪರಾಕ್ರಮಶಾಲಿಯಾದ ಹುಡುಗ.

ಆ) ಶ್ರಮದ ಫಲ.

3. ಈ ಕೆಳಗಿನ ಪದಗಳಲ್ಲಿ ಯಾವುದಾದರೂ 5ಕ್ಕೆ ಸಮಾನಾರ್ಥ ಪದ ಬರೆಯಿರಿ 10 ಅಂಕಗಳು

(ಅ) ವಂಚನೆ (ಆ) ವಾಯಿದೆ (ಇ) ಶಿಕ್ಷಣ (ಈ) ತಲೆ ತಗ್ಗಿಸು

(ಉ) ಆಪ್ತ (ಊ) ರಂಧ್ರ (ಋ) ಶ್ರಮಪಟ್ಟು (ಎ) ಕಸಬು

4. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ 5 ಕ್ಕೆ ಉತ್ತರವನ್ನು ಬರೆಯಿರಿ: 10 ಅಂಕಗಳು

ಅ) ಡಿಂಭನು ತಾಯಿಯನ್ನು ಹೊಡೆದು ಬಡಿಯಲು ಕಾರಣವೇನು?

ಆ) ಹಕೀಮನು ಬೀರಬಲ್ಲನ ಮೇಲೆ ಸೇಡು ತೀರಿಸಿಕೊಳ್ಳಲು ಏನು ಮಾಡಿದ?

ಇ) ನಾರಾಯಣ ಶೆಟ್ಟಿ ಎದುರಾದಾಗ ಶರಣಪ್ಪ ಏನನ್ನು ಕೇಳಿದ?

ಈ) ಪ್ರಾಮಾಣಿಕ ಮತ್ತು ಶ್ರಮಜೀವಿ ನೌಕರನನ್ನು ಹುಡುಕಲು ರಾಜನು ಯಾವ ಕೆಲಸವನ್ನು ಕೊಟ್ಟನು?

ಉ) ಮೂರು ವಿಗ್ರಹಗಳ ಕಿವಿಯಲ್ಲಿ ದಾರ ಹಾಕಿದಾಗ ಏನಾಯಿತು?

ಊ) ಸಮುದ್ರ ತೀರದಲ್ಲಿ ಅನೇಕ ಅಡ್ಡ ಕಟ್ಟೆಗಳನ್ನು ಏಕೆ ಕಟ್ಟಿದ್ದಾರೆ?

www.shikarat.com

5. ಈ ಕೆಳಗಿನ ಪದಗಳಿಗೆ ವಿರುದ್ಧ ಪದ ಬರೆಯಿರಿ (5 ಕ್ಕೆ ಮಾತ್ರ) 5 ಅಂಕಗಳು

(ಅ) ಮಿತ್ರ (ಆ) ಕೆಳಗೆ (ಇ) ಹುಟ್ಟು (ಈ) ಬೆಳಕು
(ಉ) ಕಪ್ಪು (ಊ) ನಗು (ಋ) ಕಷ್ಟ (ಎ) ಒಳ್ಳೆಯದು

6. ಈ ಕೆಳಗಿನ ಅಂಕಿಗಳನ್ನು ಕನ್ನಡ ಅಕ್ಷರಗಳಲ್ಲಿ ಬರೆಯಿರಿ (5 ಕ್ಕೆ ಮಾತ್ರ) 5 ಅಂಕಗಳು

(ಅ) 1,25,66,250 (ಆ) 20 (ಇ) 11,021 (ಈ) 9,999
(ಉ) 175 (ಊ) 222 (ಋ) 8,725 (ಎ) 4,25,000

7. ಈ ಕೆಳಗಿನವುಗಳನ್ನು ಅಂಕಿಯಲ್ಲಿ ಬರೆಯಿರಿ (5 ಕ್ಕೆ ಮಾತ್ರ) 5 ಅಂಕಗಳು

(ಅ) ಮುನ್ನೂರ ಮೂವತ್ತ ಮೂರು
(ಆ) ಆರು ಸಾವಿರದ ಇನ್ನೂರ ಐವತ್ತು
(ಇ) ಒಂದು ಸಾವಿರದ ನಲವತ್ತ ಒಂದು
(ಈ) ಒಂದು ಕೋಟಿ ಐವತ್ತೇಳು ಲಕ್ಷ
(ಉ) ಏಳು ನೂರ ಎಪ್ಪತ್ತೇಳು
(ಊ) ಮೂವತ್ತು ಸಾವಿರದ ಒಂದು
(ಋ) ನಲವತ್ತೈದು ಸಾವಿರದ ಒಂಭೈನೂರ ಇಪ್ಪತ್ತ ಒಂದು
(ಎ) ಹತ್ತು ಸಾವಿರದ ಹತ್ತು

8. ಈ ಕೆಳಗಿನ ಪದಗಳಿಗೆ ಲಿಂಗ ಗುರುತಿಸಿ: 10 ಅಂಕಗಳು

(ಅ) ಹೆಂಡತಿ (ಆ) ಅಣ್ಣ (ಇ) ರಾಣಿ (ಈ) ತಂಗಿ (ಉ) ತಂದೆ
(ಊ) ಹುಡುಗಿ (ಋ) ಗಿಡ (ಎ)ಪುಸ್ತಕ (ಏ) ಮಾವ (ಐ)ವಾಹನ

9. ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ: 5 ಅಂಕಗಳು

| ಎ | ಬಿ |
|---|---|
| (ಅ) ಚಾಲಕ | (ಅ) ಶಿಷ್ಯ |
| (ಆ) ಗುರು | (ಆ) ಫಲ ಉಂಟು |
| (ಇ) ಕಾಡಿನ ರಾಜ | (ಇ) ವಾಹನ |
| (ಈ) ಕಷ್ಟಪಟ್ಟರೆ | (ಈ) ಬಾಯಿ ಮೊಸರು |
| (ಉ) ಕೈ ಕೆಸರಾದರೆ | (ಉ) ಸಿಂಹ |

10. ಪ್ರಬಂಧವನ್ನು ಬರೆಯಿರಿ (ಯಾವುದಾದರೂ ಒಂದಕ್ಕೆ)(ಒಂದು ಪುಟದಷ್ಟು) 10 ಅಂಕಗಳು

(ಅ) ಗಣರಾಜ್ಯೋತ್ಸವ (ಆ) ವಿದ್ಯುತ್ ಉಳಿತಾಯ (ಇ) ಪರಿಸರ ಮಾಲಿನ್ಯ

11. ಈ ಕೆಳಗಿನ ಪದಗಳಿಗೆ ಬಹುವಚನ ರೂಪ ತಿಳಿಸಿ: 5 ಅಂಕಗಳು

(ಅ) ಹುಡುಗ (ಆ) ಪ್ರಾಣಿ (ಇ) ಹುಡುಗಿ (ಈ) ಸೈನಿಕ (ಉ) ಪುಸ್ತಕ

******

www.shikarat.com

www.shikarat.com

SHIKARAT
Online Education

## For more contact us

**Instagram**
[https://www.instagram.com/shikarat_com/](https://www.instagram.com/shikarat_com/)

**Telegram**
[https://telegram.me/shikarat](https://telegram.me/shikarat)

**Facebook**
[https://www.facebook.com/shikarat/](https://www.facebook.com/shikarat/)

**Twitter**
[https://twitter.com/Shikarat_com](https://twitter.com/Shikarat_com)

**Pinterest**
[https://in.pinterest.com/shikarat_com/](https://in.pinterest.com/shikarat_com/)

**Website**
[www.shikarat.com](www.shikarat.com)

**Email**
Admin@shikarat.com

SHIKARAT
Online Education

💞 **Sharing is Caring** 💞

😍**If it is helpful Please Share with your friends**😍

www.shikarat.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ಇಲಾಖಾ ಪರೀಕ್ಷೆಗಳು – ನವೆಂಬರ್ 2012

## ಕನ್ನಡ ಭಾಷಾ ಪರೀಕ್ಷೆ – ಪತ್ರಿಕೆ 2

(ಪುಸ್ತಕಗಳು, ಟಿಪ್ಪಣಿಗಳು, ಕೈಪಿಡಿಗಳು ಇತ್ಯಾದಿಗಳ ಉಪಯೋಗಕ್ಕೆ ಅವಕಾಶವಿಲ್ಲ)

ದಿನಾಂಕ: 30.11.2012 ಸಮಯ: 12.00 ರಿಂದ 1.00 ರವರೆಗೆ

(ಗರಿಷ್ಟ ಅಂಕಗಳು – 50)

---

**1. ಆಂಗ್ಲ ಭಾಷೆಗೆ ಅನುವಾದಿಸಿ:** **10 ಅಂಕಗಳು**

ಭಾರತದ ಪ್ರಪ್ರಥಮ ಪ್ರಧಾನಿ ಜವಾಹರಲಾಲ್ ನೆಹರು ಅವರಿಗೆ ಮಕ್ಕಳೆಂದರೆ ಬಹಳ ಪ್ರೀತಿ. ಮಕ್ಕಳು ಅವರನ್ನು ಪ್ರೀತಿಯಿಂದ ಚಾಚಾ ನೆಹರು ಎಂದು ಕರೆಯುತ್ತಿದ್ದರು. ಅದಕ್ಕಾಗಿ ನೆಹರೂರವರು ತಮ್ಮ ಜನ್ಮ ದಿನವಾದ ನವೆಂಬರ್ 14 ನ್ನು "ಮಕ್ಕಳ ದಿನ" ವನ್ನಾಗಿ ಆಚರಿಸಬೇಕೆಂದು ತಿಳಿಸಿದರು. ಅದರಂತೆ ಪ್ರತೀ ವರ್ಷ ಇದೇ ದಿನದಂದು ದೇಶದಾದ್ಯಂತ ಅದ್ದೂರಿಯಿಂದ ಮಕ್ಕಳ ದಿನಾಚರಣೆಯನ್ನು ಆಚರಿಸಲಾಗುತ್ತದೆ.

ನೆಹರೂರವರು 1886ನೇ ಇಸವಿ ನವೆಂಬರ್ 14 ರಂದು ಹೆಸರಾಂತ ವಕೀಲ ಮೋತಿಲಾಲ್ ನೆಹರು ಮತ್ತು ಸ್ವರೂಪರಾಣಿಯವರ ವರ ಪುತ್ರರಾಗಿ ಅಲಹಾಬಾದಿನಲ್ಲಿ ಜನಿಸಿದರು.

ನೆಹರೂ ತಮ್ಮ ಹದಿನೈದನೆಯ ವಯಸ್ಸಿನಲ್ಲಿ ಇಂಗ್ಲೆಂಡ್‌ನ ಹ್ಯಾರೋ ಶಾಲೆಗೆ ಸೇರಿಸಲ್ಪಟ್ಟರು. ಮುಂದೆ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದಲ್ಲಿ ಸೇರಿ ಎಂ.ಎ., ಪದವಿ ಪಡೆದ ನಂತರ ಬ್ಯಾರಿಸ್ಟರ್ ಪರೀಕ್ಷೆಗಳಲ್ಲಿ ಉತ್ತೀರ್ಣರಾದರು. ವ್ಯಾಸಂಗ ಮುಗಿಸಿ 1912 ರಲ್ಲಿ ಸ್ವದೇಶಕ್ಕೆ ಹಿಂತಿರುಗಿ ತಂದೆಯಂತೆ ತಾವೂ ವಕೀಲ ವೃತ್ತಿಯನ್ನು ಆರಂಭಿಸಿದರು.

ನೆಹರೂ 1912 ರಲ್ಲಿ ಫೆಬ್ರವರಿ 8 ರಂದು ಕಮಲರೊಡನೆ ವಿವಾಹವಾದರು. ಮುಂದೆ ನೆಹರೂ ರವರಿಗೆ ಇಂದಿರಾ ಪ್ರಿಯದರ್ಶಿನಿ ಏಕೈಕ ಪುತ್ರಿಯಾಗಿ ಜನಿಸಿದರು.

**2. ಈ ಕೆಳಗಿನವುಗಳಲ್ಲಿ ಯಾವುದಾದರೂ 10ನ್ನು ಆಂಗ್ಲ ಭಾಷೆಗೆ ಭಾಷಾಂತರಿಸಿ:** **10 ಅಂಕಗಳು**

(ಅ) ಪೂರ್ಣ ವೇತನದ ರಜೆ (ಆ) ತಾಳೆಪಟ್ಟಿ (ಇ) ಪ್ರವಾಸಭತ್ಯೆ (ಈ) ಗೈರು ಹಾಜರಿ
(ಉ) ಲೆಕ್ಕ ಶೀರ್ಷಿಕೆ (ಊ) ಮುಂಗಡಪ್ರತಿ (ಋ) ಜಾಹಿರಾತು (ಎ) ಸಂಕ್ಷಿಪ್ತ ಟಿಪ್ಪಣಿ
(ಏ) ಅನುಕಂಪ (ಐ) ರವಾನಿಸು (ಒ) ಪ್ರಸರಣಾ ಮಾರ್ಗ (ಓ) ತರಬೇತಿ

**3. ಈ ಕೆಳಗಿನ ವಾಕ್ಯಗಳನ್ನು ಆಂಗ್ಲ ಭಾಷೆಗೆ ಭಾಷಾಂತರಿಸಿ:** **5 ಅಂಕಗಳು**

(ಅ) ಕ್ರಯ ಪತ್ರದ ನೆರಳಚ್ಚನ್ನು ರವಾನಿಸಿ
(ಆ) ಹಿಂಪಾವತಿ ಬಿಲ್ಲನ್ನು ಮೇಲು ರುಜುವಿಗಾಗಿ ಸಲ್ಲಿಸಿದೆ
(ಇ) ತಪಾಸಣಾ ವರದಿಯನ್ನು ಕೂಡಲೇ ಕಳುಹಿಸಿ
(ಈ) ಕಾರ್ಯಾದೇಶವನ್ನು ಮಂಜೂರಾತಿಗಾಗಿ ಲಗತ್ತಿಸಲಾಗಿದೆ.
(ಉ) ಜರೂರು ಎಂದು ಪರಿಗಣಿಸಿ

www.shikarat.com

4. ಕನ್ನಡ ಭಾಷೆಗೆ ಭಾಷಾಂತರಿಸಿ: 10 ಅಂಕಗಳು

Mohanadas Karamachand Gandhi was born on 2nd October 1869 at Porbandar. His father's name was Karamachand Gandhi and mother's name was Puthali Bai. After his education he started his profession as a lawyer at Mumbai. Later he shifted his profession to Rajkot. He went to South Africa during 1893 and returned to motherland after 22 years.

After returning to India he fought against Britishers in Ahimsa Marg to get independence to our country. He was assassinated on 30th January, 1948 by Nathuram Vinayak Godse.

5. ಕನ್ನಡಕ್ಕೆ ಅನುವಾದಿಸಿ: (ಯಾವುದಾದರೂ 10ನ್ನು) 10 ಅಂಕಗಳು

(ಅ) Financial Adviser
(ಆ) Stock Register
(ಇ) Agenda
(ಈ) Belated Payment
(ಉ) Casual leave
(ಊ) Death cum retirement gratuity
(ಋ) Earnest money deposit
(ಎ) Generating Station
(ಏ) History of service
(ಐ) Ill-health
(ಒ) Joining time
(ಓ) Superannuation

6. ಈ ವಾಕ್ಯಗಳನ್ನು ಕನ್ನಡಕ್ಕೆ ಭಾಷಾಂತರಿಸಿ: 5 ಅಂಕಗಳು

(ಅ) Work is worship
(ಆ) Barking dogs seldom bite
(ಇ) Smoking is a bad habit
(ಈ) Where there is a will there is a way
(ಉ) Exercise is good for health

*******

www.shikarat.com